## ಉಪವಿಭಾಗಾಧಿಕಾರಿಯ ಕಛೇರಿ ಸ್ಥಾಪನೆ

**3 (96) ಶ್ರೀ ಅಪ್ಪಾಜಿ@ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ (ಮುದ್ದೇಬಿಹಾಳ್)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗ ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣಕ್ಕೆ ಉಪವಿಭಾಗಾಧಿಕಾರಿಗಳ ಕಚೇರಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ,

ಆ) ಉಪವಿಭಾಧಿಕಾರಿ ಕಚೇರಿಗಾಗಿ ಮಿನಿ ವಿಧಾನಸೌಧದಲ್ಲಿ ಸ್ಥಳ ಕಾಯ್ದಿರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಚೇರಿ ಸ್ಥಾಪನೆಯಿಂದ ತಾಳಿಕೋಟೆ ಬ ಬಾಗೇವಾಡಿ ಹಾಗೂ ಸಿಂದಗಿ ತಾಲ್ಲೂಕಿನ ಸಾರ್ವಜನಿಕರಿಗೆ ಅನುಕೂಲವಾಗಲಿರುವ ಕಾರಣ ದಿಂದ ಉಪವಿಭಾಗಾಧಿಕಾರಿ ಕಚೇರಿಯನ್ನು ಸ್ಥಾಪಿಸಬೇಕೆಂಬ ಬೇಡಿಕ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, (ವಿವರ ನೀಡವುದು)

ಈ) ಹಾಗಿದ್ದಲ್ಲಿ ಯಾವಾಗಿನಿಂದ ಕಚೇರಿಯನ್ನು ಸ್ಥಾಪಿಸಲಾಗುವುದು?

**ಶ್ರೀ ವಿ.ಶ್ರೀನಿವಾಸ ಪ್ರಸಾದ್ ಮಾನ್ಯ ಕಂದಾಯ ಸಚಿವರು**

ಅ) ಯಾವುದೇ ಪ್ರಸ್ತಾವನೆ ಇಲ್ಲ.

ಆ) ಸ್ಥಳಾವಕಾಶವಿರುತ್ತದೆ

ಇ) ಬಂದಿರುವುದಿಲ್ಲ

ಈ) ಪ್ರಸ್ತಾವನೆ ಇಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

## ತಾಲ್ಲೂಕು ಕೇಂದ್ರಗಳ ಸ್ಥಾಪನೆ

**4 (54) ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಬಾವಿ)** . ಕಂದಾಯ ಸಚಿವರು ಈ ಕೆಳಕಂಡ ಪ್ರಶೆಗಳಿಗೆ ದಯವಿಟ್ಟು ಉತ್ತರಿಸುವರೇ?